ವಿಚಾರ ಮನವನ್ನು ಆಕ್ರಮಿಸುವಷ್ಟರಲ್ಲಿ ಅಪ್ಪನ ನೆನಪು ಪುನಃ ನುಗ್ಗಿ ಬಂತು. ಅಳುತ್ತಲೇ ಒಂದಷ್ಟು ಬಟ್ಟೆಗಳನ್ನು ಒಂದು ಕಿಟ್ ಬ್ಯಾಗಿಗೆ ತುಂಬಿದಳು. ಅರ್ಧ ಗಂಟೆಯೊಳಗೆ ಮಕ್ಕಳನ್ನು ಕರೆದುಕೊಂಡು ಶ್ರೀನಿವಾಸ ಬಂದ. ಮಕ್ಕಳು ಯೂನಿಫಾರಂ ತೆಗೆದು ಬೇರೆ ಬಟ್ಟೆ ಹಾಕಿಕೊಳ್ಳುವಷ್ಟರಲ್ಲಿ ಶ್ರೀನಿವಾಸನೇ ಅಡಿಗೆ ಮನೆಗೆ ಹೋಗಿ ಹಾಲು ಮೊಸರುಗಳನ್ನು ಒಂದೊಂದು ಬಾಟಲಿಗೆ ಹಾಕಿದ. ಒಂದು ಬಾಟಲಿಗೆ ನೀರು ತುಂಬಿಕೊಂಡ. ನಂತರ ಬೆಳಿಗ್ಗೆ ಮಾಡಿದ ಉಪ್ಪಿಟ್ಟು ಹಾಗೆಯೇ ಇದ್ದುದನ್ನು ಗಮನಿಸಿ ಒಂದು ತಟ್ಟೆಗೆ ಹಾಕಿಕೊಂಡು ಬಂದು ರೋಹಿಣಿಗೆ ಕೊಟ್ಟ.

'ತಿನ್ನು ರೋಹಿಣಿ. ತಿಂಡೀನೇ ತಿಂದಿಲ್ಲ ನೀನು.'

'ನಂಗೆ ಬೇಡಾರಿ. ಮನಸ್ಸೇ ಸರಿಯಿಲ್ಲ.'

'ಸುಮ್ನೆ ವೇಸ್ಟಾಗುತ್ತೆ. ಸ್ವಲ್ಪ ತಿನ್ನಬಾರದೇ ರೋಹಿಣಿ?'

ಸಿಟ್ಟು ಬಂತು ರೋಹಿಣಿಗೆ. ಗಂಡನನ್ನು ದುರು ದುರು ನೋಡಿ ಬೇರೆಡೆ ಮುಖ ತಿರುಗಿಸಿಕೊಂಡಳು. ಶ್ರೀನಿವಾಸ ಮರುಮಾತನಾಡದೆ ಅದನ್ನು ತಾನೇ ತಿಂದು ತಟ್ಟೆ ತೊಳೆದಿಟ್ಟ. ಮಧ್ಯಾಹ್ನದ ಬುತ್ತಿಯನ್ನು ಮಕ್ಕಳು ಖಾಲಿ ಮಾಡಿದರು. ಶ್ರೀನಿವಾಸನೇ ರೋಹಿಣಿಯನ್ನು ಹೊರಡಿಸಿ ಬಾಗಿಲಿಗೆ ಬೀಗ ಹಾಕಿದ. ಅಕ್ಕಪಕ್ಕದ ಮನೆಯವರಿಗೆ ಹೇಳಿ ಬಂದ.

ರೋಹಿಣಿಗೆ ಒಂದೇ ಚಿಂತೆ. ಇಷ್ಟು ಹೊತ್ತಿನಲ್ಲಿ ಯಾವ ಬಸ್ಸಿದೆ? ಅವಳ ಚಿಂತೆಗೆ ಪೂರ್ಣವಿರಾಮ ಹಾಕಿದ್ದು ಮನೆಯ ಮುಂದೆ ನಿಂತಿದ್ದ ಒಂದು ಟ್ಯಾಕ್ಸಿ. ಅಚ್ಚರಿಯಿಂದ ನಂಬಲಾರದವಳಂತೆ ಗಂಡನನ್ನೇ ನೋಡಿದಳು. ಶ್ರೀನಿವಾಸ ಅವಳಿಗೆ ಧೈರ್ಯ ಹೇಳುವವನಂತೆ ನಸುನಕ್ಕು ಕಾರು ಹತ್ತಲು ಹೇಳಿದ. ಟ್ಯಾಕ್ಸಿ ವೇಗವಾಗಿ ಸಾಗಿತು.

ಊರು ತಲುಪುವಷ್ಟರಲ್ಲಿ ಆರುಗಂಟೆಯಾಗಿತ್ತು. ರೋಹಿಣಿ ಕಾರಿನಿಂದ ಇಳಿದವಳೇ ಮನೆಯ ಅಕ್ಕಪಕ್ಕ ನೋಡಿದಳು. ಅಕ್ಕ ತಂಗಿಯರ ಕಾರುಗಳು ಕಾಣಲಿಲ್ಲ. 'ಇನ್ನೂ ಬಂದಿಲ್ಲವೇ' ಎಂದುಕೊಂಡಳು. ಶ್ರೀನಿವಾಸ ಲಗೇಜು ಇಳಿಸಿ ಡ್ರೈವರನೊಡನೆ ಮಾತಿಗೆ ನಿಂತ. ಡ್ರೈವರ್ ಕೇಳಿದಷ್ಟು ಹಣ ಕೊಡಲು ಶ್ರೀನಿವಾಸ ಒಪ್ಪುತ್ತಿಲ್ಲ, ಅವನು ಬಿಡುತ್ತಿಲ್ಲ. ಕಿಲೋಮೀಟರ್ ಲೆಕ್ಕ ಹಾಕಿ ಆತ ಗುಣಿಸಿ ಹೇಳಿದ್ದೇ ಹೇಳಿದ್ದು. ಶ್ರೀನಿವಾಸ ಸುಮಾರು ಕಾಲುಗಂಟೆ ಚೌಕಾಸಿ ಮಾಡಿ ಐದು ರೂಪಾಯಿ ಕಡಿಮೆ ಕೊಟ್ಟು ಗೆದ್ದೆನೆಂದುಕೊಂಡು ಒಳಗೆ ಬಂದ. ಅಷ್ಟರಲ್ಲಿ ರೋಹಿಣಿ ತಂದೆಯ ಪಕ್ಕ ಕುಳಿತು ತಾಯಿಯೊಡನೆ ಮಾತನಾಡುತ್ತಿದ್ದಳು. ಶ್ರೀನಿವಾಸ ಒಳಗೆ ಬರುತ್ತಿದ್ದಂತೆ ಅತ್ತೆ ಎದ್ದು ನಿಂತರು.

'ಬನ್ನಿ, ಕುಳಿತುಕೊಳ್ಳಿ.'

ಶ್ರೀನಿವಾಸ ಅಲ್ಲೇ ಇದ್ದ ಕಬ್ಬಿಣದ ಕುರ್ಚಿಯನ್ನು ಮೆಲ್ಲಗೆ ಬಿಡಿಸಿ ಸದ್ದಾಗದಂತೆ ಇಟ್ಟು ಕುಳಿತು ಕೇಳಿದ–

'ಹೇಗಾಯಿತು? ಏನಾಯಿತು?'

ಬೆಳಿಗ್ಗೆ ರೋಹಿಣಿ ಹೇಳಿದ ವಿಚಾರಗಳನ್ನೇ ಅತ್ತೆ ಮೆಲುದನಿಯಲ್ಲಿ ವಿವರಿಸಿದರು. ಶ್ರೀನಿವಾಸ ಮೌನವಾಗಿ ಕೇಳಿದ. ಅಷ್ಟರಲ್ಲಿ ವೈದ್ಯರು ಬಂದದ್ದರಿಂದ ರೋಹಿಣಿ ಮತ್ತು ಅವಳ ತಾಯಿ ಹೊರಗೆ ಬಂದರು. ತಪಾಸಣೆಯ ನಂತರ ಶ್ರೀನಿವಾಸ ವೈದ್ಯರೊಡನೆ ಮಾತನಾಡಿದ.

ಮರುದಿನ ಮಧ್ಯಾಹ್ನದ ಲತಾ, ವೀಣಾ, ಗೀತಾ ಬಂದರು. ಆ ವೇಳೆಗೆ ಶ್ರೀಪತಿರಾಯರು ಕೊಂಚ ಸುಧಾರಿಸಿಕೊಂಡಿದ್ದರು. ನಿಧಾನವಾಗಿ ಮೆಲುದನಿಯಲ್ಲಿ ಮಾತನಾಡುವಂತಾಗಿದ್ದರು.